ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾ ಸಲಾದ ವಿಷಯಗಳು

ವಿಷಯ :

ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ) :– ಮಾನ್ಯ ಅಧ್ಯಕ್ಷರೆ, ಇವತ್ತು ಬೆಳಗಿನ ಪತ್ರಿಕೆಯಲ್ಲಿ ಒಂದು ವಿಷಯ ಪ್ರಕಟವಾಗಿದೆ. ಇವತ್ತು ಉತ್ತರ ಕರ್ನಾಟಕದ ಭಾಗದಲ್ಲಿ ಗುಲ್ಬರ್ಗಾ ಮತ್ತು ಹುಬ್ಬಳ್ಳಿ –ಧಾರವಾಡ ಈ ಎರಡು ಕ್ಷೇತ್ರಗಳಲ್ಲಿ ಬಹಳ ವರ್ಷಗಳಿಂದ ಹೈಕೋರ್ಟ್ ಪೀಠ ಬೇಕೆಂದು ಹೋರಾಟವನ್ನು ಮಾಡಿಕೊಂಡು ಬಂದಿದ್ದೇವೆ. ಹೀಗಾಗಿ ಕರ್ನಾಟಕ ಹೈಕೋರ್ಟ್ ಅದಕ್ಕೆ ಸ್ಪಂದನೆ ಮಾಡಿ ಹಿಂದೆ ಮುಖ್ಯ ನ್ಯಾಯಾಧೀಶರಾಗಿದ್ದಂತಹ ಜೈನ್‌ರವರ ಕಾಲದಲ್ಲಿ ಸರ್ಕ್ಯುಟ್ ಬೆಂಚ್‌ಗಳನ್ನು ಎರಡು ಸ್ಥಳಗಳಲ್ಲಿ ಸ್ಥಾಪನೆಯಾಗುವುದರ ಬಗ್ಗೆ ನೋಟಿ , ಕೇಶನ್ ಆಯಿತು. ಅದಕ್ಕೆ ನಾವೆಲ್ಲರೂ ಸ್ವಾಗತ ಮಾಡಿದ್ದೇವೆ. ರಾಜ್ಯ ಸರ್ಕಾರಕ್ಕೂ ಹಾಗೂ ಹೈಕೋರ್ಟಿನ ಮುಖ್ಯನ್ಯಾಯಧೀಶರಿಗೂ ಸಹ ಅಭಿನಂದನೆಗಳನ್ನು ಕರ್ನಾಟಕದ ಜನತೆ ಸಲ್ಲಿಸಿದೆವು. ಕಳೆದ 8–10 ತಿಂಗಳುಗಳಿಂದ ಈ ಒಂದು ಸರ್ಕ್ಯುಟ್ ಬೆಂಚ್ ಸ್ಥಾಪನೆಯ ವಿಷಯದಲ್ಲಿ ಒಂದಿಷ್ಟು ಯಾವುದೇ ಪ್ರಗತಿಯಾಗಲಿಲ್ಲ. ಇವತ್ತು ಬೆಳಗಿನ ಪತ್ರಿಕೆಗಳನ್ನು ನೋಡಿದರೆ ಮುಖ್ಯನ್ಯಾಯಾಧೀಶರು ಮೇ 30ನೇ ತಾರೀಖು ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದು ಈ ಸರ್ಕ್ಯುಟ್ ಬೆಂಚ್ ಸ್ಥಾಪನೆಯಾಗುವುದಕ್ಕೆ ಏನು ಸ್ಥಳಗಳನ್ನು ತಾವು ನಿಗದಿ ಮಾಡಿದ್ದೀರಿ, ಧಾರವಾಡದಲ್ಲಿ ವಾಲ್ಮಿ ಬಿಲ್ಡಿಂಗ್ ಮತ್ತು ಗುಲ್ಬರ್ಗಾದಲ್ಲಿ ಐವಾನಶಾಹಿ ಗೆಸ್ಟ್ ಹೌಸ್ ಏನಿದೆ ಆ ಒಂದು ಬಿಲ್ಡಿಂಗ್ ಇವೆರಡು ಸರ್ಕ್ಯುಟ್ ಬೆಂಚ್‌ಗಳನ್ನು ಸ್ಥಾಪನೆ ಮಾಡುವುದಕ್ಕೆ ಯೋಗ್ಯವಾದಂತಹ ಸ್ಥಳಗಳು ಅಲ್ಲವೆಂದು ಹೇಳಿ ಇವತ್ತು ಮುಖ್ಯ ನ್ಯಾಯಾಧೀಶರು ಮುಖ್ಯಮಂತ್ರಿಗಳಿಗೆ ಪತ್ರ ಬರೆದಂತಹ ವಿಷಯ ಇವತ್ತಿನ ಬೆಳಗಿನ ಪತ್ರಿಕೆಗಳನ್ನು ನೋಡಿದಾಗ ಗೊತ್ತಾಯಿತು. ಕೇಂದ್ರದ ಕಾನೂನು ಸಚಿವರಾದಂತಹ ಶ್ರೀವೆಂಕಟಪತಿಯವರು ಮೊನ್ನೆ ಮುಖ್ಯನ್ಯಾಯಾಧೀಶರನ್ನು ಭೇಟಿಯಾಗಿ ಬಂದಂತಹ ಸಂದರ್ಭದಲ್ಲಿ ಅವರು ಈ ವಿಷಯವನ್ನು ಸಾರ್ವಜನಿಕ ಸಭೆಯಲ್ಲಿ ಬಹಿರಂಗಪಡಿಸಿದ ಮೇಲೆ ಇವತ್ತು ಕರ್ನಾಟಕದ ಜನತೆಗೆ ಈ ವಿಷಯ ಗೊತ್ತಾಯಿತು.

ಶ್ರೀ ಜಗದೀಶ್ ಶೆಟ್ಟರ್ (ಮುಂದು) ಮೇ 30 ರಂದು ಮುಖ್ಯ ನ್ಯಾಯಮೂರ್ತಿಗಳಾದ ಶ್ರೀ ಎನ್. ಕೆ. ಸೋದಿಯವರು ಪತ್ರ ಬರೆದು

ಹೇಳಿದಾಗಲೂ ಸಹಿತ ಮೇ 30 ರಿಂದ ಇಲ್ಲಿಯವರೆಗೆ ನಮ್ಮ ರಾಜ್ಯ ಸರ್ಕಾರ ಹಾಗೂ ನಮ್ಮ ಕಾನೂನು ಸಚಿವರು ಏಕೆ ಕೈಕಟ್ಟಿಕೊಂಡು ಕುಳಿತುಕೊಂಡಿದ್ದರು, ಅಲ್ಲಿಂದ ಇಲ್ಲಿಯವರೆಗೆ ನಮ್ಮ ಮುಖ್ಯಮಂತ್ರಿಗಳು, ಕಾನೂನು ಸಚಿವರು ಏನು ಮಾಡಿದರು ಎಂಬ ವಿಷಯವು ಸಾರ್ವಜನಿಕರಲ್ಲಿ ಚರ್ಚೆಯಾಗುತ್ತಿದೆ. ಈ ವಿಷಯ ಇವತ್ತು ಹೊರಗೆ ಬಿಳಬೇಕಾಗಿದೆ. ಜೂನ್ 30 ರಿಂದ ಅಧಿವೇಶನ ನಡೆಯುತ್ತಿದೆ. ಜಿಲ್ಲಾ ಹಾಗೂ ತಾಲೂಕು ಪಂಚಾಯತ್ ಬಗ್ಗೆ ಹೈಕೋರ್ಟ್ ತೀರ್ಪು ಬಂದಂತಹ ಸಂದರ್ಭದಲ್ಲಿ ಕಾನೂನು ಸಚಿವರು ಅಂದೇ ಸದನದಲ್ಲಿ ಈ ತೀ ರ್ಪನ ಬಗ್ಗೆ ಸದನದ ಗಮನಕ್ಕೆ ತರಬೇಕಾಗುತ್ತದೆಂದು ಹೇಳಿಕೆ ನೀಡಿದ್ದರು. ಮುಖ್ಯ ನ್ಯಾಯಾಧೀಶರು ಮುಖ್ಯಮಂತ್ರಿಗಳಿಗೆ ಯಾವುದೇ ಮೂಲ ಸೌಕರ್ಯಗಳನ್ನು ಸರ್ಕಾರ ನೀಡದಿದ್ದರೆ ನಾವು ಸರ್ಕಿಟ್ ೀಠವನ್ನು ಸ್ಥಾ ಪಿಸಲು ತಯಾರಿಲ್ಲವೆನ್ನುವ ರೀತಿಯಲ್ಲಿ ಅವರು ಬರೆದಿದ್ದಾರೆ. ಇದರಿಂದ ಉತ್ತರಕರ್ನಾಟಕದ ಜನತೆಯ ಕನಸು, ಆಸೆಗೆ ಧಕ್ಕೆಯಾಗುವ ಪರಿಸ್ಥಿತಿ ನಿರ್ಮಾಣವಾದ ಪರಿಸ್ಥಿತಿಯನ್ನು ನಾವು ಇವತ್ತು ಕಾಣುತ್ತಿದ್ದೇವೆ. ಹಾಗಾಗಿ ಇವತ್ತು ರಾಜ್ಯ ಸರ್ಕಾರ ಇದಕ್ಕೆ ಸ್ಪಷ್ಟನೆ ನೀಡಬೇಕು. ಇದರ ಬಗ್ಗೆ ಚುಕ್ಕೆ ಗುರುತಿನ ಪ್ರಶ್ನೆ, ಗಮನ ಸೆಳೆಯುವ ಸೂಚನೆ, ಹೀಗೆ ಬೇರೆ ಬೇರೆ ರೂಪದಲ್ಲಿ ಸದನದಲ್ಲಿ ಪ್ರಸ್ತಾಪ ಮಾಡಲಿಕ್ಕೆ ಪ್ರಯತ್ನಿಸಿದ್ದೇವೆ, ಆದರೆ ಇವತ್ತಿನ ಬೆಳಗಿನ ದಿನಪತ್ರಿಕೆಯನ್ನು ನೋಡಿದ ಮೇಲೆ ಈ ಬಗ್ಗೆ ಶೂನ್ಯವೇಳೆಯಲ್ಲಿ ಈ ವಿಚಾರವನ್ನು ಜರೂರಾಗಿ ಚರ್ಚೆಗೆ ಎತ್ತಿಕೊಂಡಿದ್ದೇವೆ. ಅದಕ್ಕೆ, ರಾಜ್ಯಸರ್ಕಾರ ಇವತ್ತು ಏಕೆ ಹೀಗಾಯಿತು ಎಂಬ ಬಗ್ಗೆ ಸ್ಪಷ್ಟನೆ ನೀಡಬೇಕು. ಮುಖ್ಯನ್ಯಾಯಾಧೀಶರನ್ನು ಭೇಟಿಯಾಗಿ ತಕ್ಷಣ ಈ ಬಗ್ಗೆ ಸರಿಯಾದಂತಹ ಒಂದು ನಿಲುವನ್ನು ತೆಗೆದುಕೊಳ್ಳಬೇಕೆಂದು ಒತ್ತಾಯವನ್ನು ಮಾಡುತ್ತಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ):– ಮಾನ್ಯ ಜಗದೀಶ್ ಶೆಟ್ಟರ್ ಅವರು ಬಹಳ ಪ್ರಮುಖವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನೀವು ಸಹ ಆ ಭಾಗದಿಂದಲೇ ಬಂದಿದ್ದೀರಿ. ಈ ಹೈಕೋರ್ಟ್ ಸರ್ಕಿಟ್ ಬೆಂಚ್ ಆಗಬೇಕು ಅನ್ನುವುದರ ಬಗ್ಗೆ ಒಲವು ತೋರಿಸಿ ಅನೇಕ ವರ್ಷಗಳು ಹೋರಾಟವಾಗಿ ಬಜೆಟ್‌ನಲ್ಲಿ ಸಹ ಇದಕ್ಕೆ ಪ್ರಾವಿಷನ್ ಮಾಡಿದರು. ಆದರೆ ಇವತ್ತು ಉತ್ತರಕರ್ನಾಟಕದ ಜನತೆಗೆ ಒಂದು ರೀತಿಯಲ್ಲಿ ನಂಬಿಕೆದ್ರೋಹವಾಗುತ್ತಿದೆಯೆಂದು ನಮಗೆ ಎನಿಸಿದೆ. ನೀವು ಬಜೆಟ್‌ನಲ್ಲಿ

ಸರ್ಕಿಟ್ ಬೆಂಚ್ ಸ್ಥಾಪನೆಗೆ ಹಣವನ್ನು ತೆಗೆದಿರಿಸಿದ ನಂತರ, ಬಹಳ ಒತ್ತಾಯದ ಮೇರೆಗೆ ಹೈಕೋರ್ಟ್ ನ್ಯಾಯಾಧೀಶರು ಒ ಪ್ಪಿಗೆ ಕೊಟ್ಟಿರುವ ಸಂದರ್ಭದಲ್ಲಿ ಅದಕ್ಕೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ವ್ಯವಸ್ಥೆ ಮಾಡತಕ್ಕದ್ದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಅಲ್ಲಿರುವ ಸವಲತ್ತುಗಳೊಂದಿಗೆ ಉಳಿದ ಅಗತ್ಯವಿರುವುದನ್ನೆಲ್ಲಾ ಮಾಡಿ, ಹೈಕೋರ್ಟಿನ ಮುಖ್ಯ ನ್ಯಾಯಮೂರ್ತಿಗಳು ಯಾವುದೇ ಸಣ್ಣ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸದಿರುವಂತೆ ನೀವು ಈ ಕೆಲಸವನ್ನು ಪ್ರಾರಂಭಿಸಲಿಕ್ಕೆ ಅವರಿಂದ ಸೂಚನೆ ಪಡೆಯುವ ಪ್ರಯತ್ನ ಮಾಡದೆ.... ಹಾವು ಸಾಯಬಾರದು, ಕೋಲು ಮುರಿಯಬಾರದು ಎನ್ನುವ ರೀತಿಯಲ್ಲಿ ಸನ್ನಿವೇಶ ಉಂಟಾಗಿದೆ. ಇದು ಧರ್ಮವೇ, ಕಳೆದ 5–6 ವರ್ಷಗಳಿಂದ ಓಡಾಡಿ ಸತ್ಯಾಗ್ರಹ, ಚಳವಳಿ ಮಾಡಿ, ಹುಬ್ಬಳ್ಳಿ, ಇಡೀ ರಾಜ್ಯದಲ್ಲಿ ವಕೀಲರ ಸಮೂಹವೇ ಈ ರೀತಿ ಹೋರಾಟ ಮಾಡಿದ ಮೇಲೆ ಶ್ರೀ ಹೆಚ್.ಕೆ. ಪಾಟೀಲ್ ಅವರೇ ದೈವಿಕವಾಗಿ ಕಾನೂನು ಸಚಿವರಾಗಿ ಇಲ್ಲಿ ಕುಳಿತುಕೊಳ್ಳುವಂತಹ ಅವಕಾಶ ಸಿಕ್ಕಾಗ ಈ ರೀತಿ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು ಪತ್ರ ಬರೆಯುವುದಕ್ಕೆ ಮುಂಚೆ ತಾವು ಕ್ರಮ ತೆಗೆದುಕೊಳ್ಳಬೇಕಾಗಿತ್ತು ಅಥವಾ ಅವರು ಪತ್ರವನ್ನು ಬರೆದ ತಕ್ಷಣ ಅವರನ್ನು ಭೇಟಿ ಮಾಡಿ ಬೇಕಾದಂತಹ ಮೂಲಭೂತ ಸೌಕರ್ಯಗಳ ವ್ಯವಸ್ಥೆಯನ್ನು ಮಾಡುವುದು, ಆ ಭಾಗದ ಜನರ ಸಲಹೆ, ಸಹಕಾರವನ್ನು ತೆಗೆದುಕೊಂಡು ವ್ಯವಸ್ಥೆಯನ್ನು ಮಾಡಬೇಕಾಗಿತ್ತು. ಇದ್ಯಾವುದನ್ನು ಮಾಡದೇ ಕೈಗೆ ಬಂದಿರುವುದನ್ನು ಕಳೆದುಕೊಳ್ಳುವಂತಹ ಪರಿಸ್ಥಿತಿ ಬಂದಿದೆ. ಉತ್ತರ ಕರ್ನಾಟಕದಲ್ಲಿ ನಾವು ಚುನಾಯಿತ ಪ್ರತಿನಿಧಿಗಳಾಗಿ ತಲೆ ಎತ್ತಿ ಗೌರವವಾಗಿ ಓಡಾಡಲಿಕ್ಕೆ ಸಾಧ್ಯವಿದೆಯೇ ? ಈ ಪತ್ರ ಬಂದಿರುವುದು ನಿಜವೇ? ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ? ಮೂಲ ಭೂತ ಸೌಕರ್ಯಗಳ ಅನುಕೂಲ ಮಾಡಿಕೊಟ್ಟು ಅಲ್ಲಿ ಸರ್ಕೀಟ್ ೀಠವನ್ನು ಮಾಡಲಿಕ್ಕೆ ಏನು ಪ್ರಯತ್ನವನ್ನು ತೆಗೆದುಕೊಂಡಿದ್ದೀರಿ, ಸರ್ಕೀಟ್ ೀಠವನ್ನು ಸ್ಥಾ ಸುವಿರೋ, ಇಲ್ಲವೋ ಇದರ ಬಗ್ಗೆ ಸ್ಪಷ್ಟನೆಯನ್ನು ನೀಡಬೇಕು.

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಸನ್ಮಾನ್ಯ ಸದಸ್ಯರಾದ ಶ್ರೀ ಜಗದೀಶ್ ಶೆಟ್ಟರ್ ಅವರು ಅತ್ಯಂತ ಗಂಭೀರವಾದಂತಹ ವಿಚಾರಗಳನ್ನು ಶೂನ್ಯವೇಳೆಯಲ್ಲಿ ಈ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಈ

ಕುರಿತು ಕೆಲವು ಪ್ರಶ್ನೆಗಳನ್ನು ಎತ್ತಿದ್ದಾರೆ. ಈಗಾಗಲೇ ಪತ್ರಿಕೆಯಲ್ಲಿ ವರದಿಯಾಗಿರುವ ಹಾಗೆ ಸನ್ಮಾನ್ಯ ಮುಖ್ಯ ನ್ಯಾಯಾಧೀಶರು ಮೇ 30 ರಂದು ಒಂದು ಪತ್ರವನ್ನು ಬರೆದಿದ್ದಾರೆ. ಈ ಪತ್ರ ಸರ್ಕಾರಕ್ಕೆ ತಲು ದೆ.

(ಈ ಹಂತದಲ್ಲಿ ಉಪಾಧ್ಯಕ್ಷರು ಅಧ್ಯಕ್ಷರ ೇತವನ್ನು ಅಲಂಕರಿಸಿದರು.) ಆ ಪತ್ರದ ಹಿನ್ನೆಲೆಯಲ್ಲಿ ಸರ್ಕಾರ ಏನು ಕೆಲಸ ಮಾಡಬೇಕಾಗಿದೆ, ಯಾವ ಯಾವ ಹೆಜ್ಜೆಗಳನ್ನು ಇಡಬೇಕಾಗಿದೆ ನಮ್ಮ ಸ್ಪಂದನೆ ಏನು ಇತ್ಯಾದಿಗಳ ಬಗ್ಗೆ ಸರ್ಕಾರ ವಿವರವಾದ ಹೇಳಿಕೆಗಳನ್ನು ಮಾಡಬೇಕಾಗುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಗಳವರ ಜೊತೆಯಲ್ಲಿ ಚರ್ಚೆ ಮಾಡಿ ನಾಳೆ ಯಾವ ವೇಳೆಯಲ್ಲಿ ಈ ಚರ್ಚೆಗೆ ಸಮಯ ನಿಗದಿಪಡಿಸಲಾಗುವುದೋ ಆ ಸಮಯಕ್ಕೆ ವಿವರವಾಗಿ ಹೇಳಿಕೆಯನ್ನು ನೀಡಬೇಕಾಗುತ್ತದೆ. ಏಕೆಂದರೆ ಜನತೆಯನ್ನು ಆತಂಕಕ್ಕೆ ಒಳಪಡಿಸುವುದು ಬೇಡ. ಹೈಕೋರ್ಟ್ ಕೆಲವು ಕರಾರು ಹೇಳಿ ಕಾಂಪ್ಲೆಕ್ಸ್ ಹೇಗಿರಬೇಕು, ಅದರ ನಾರ್ಮ್ಸ್ ಏನು ಎಂಬ ಬಗ್ಗೆ ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ, ಆದರೆ ನಮ್ಮ ಹುಬ್ಬಳ್ಳಿ, ಧಾರವಾಡ ಹಾಗೂ ಗುಲ್ಬರ್ಗಾದಲ್ಲಿ ಸರ್ಕಿಟ್ ಬೆಂಚ್ ಸ್ಥಾ ಸುವುದರ ಬಗ್ಗೆ ಯಾವುದೇ ಅಡೆತಡೆ ಬರುವಂತಹ ಪ್ರಶ್ನೆಯೇ ಇಲ್ಲ. ನಾವು ಏನು ಬೇಸಿಕ್ ಫೆಸಿಲಿಟೀಸ್ ಪ್ರೊವೈಡ್ ಮಾಡಬೇಕು. , ಸಿಕಲ್ ಇನ್‌ಸ್ಟ್ರಾಸ್ಟ್ರಕ್ಚರ್ ಪ್ರೊವೈಡ್ ಮಾಡಬೇಕು, ಇವುಗಳ ಬಗ್ಗೆ ಮಾತ್ರ ಅವರು ಪ್ರಸ್ತಾಪಗಳನ್ನು ಮಾಡಿದ್ದಾರೆಯೇ ಹೊರತು ನಮ್ಮ ಹುಬ್ಬಳ್ಳಿ, ಧಾರವಾಡ, ಗುಲಬರ್ಗಾ ಸರ್ಕಿಟ್ ಬೆಂಚ್‌ಗಳನ್ನು ಸ್ಥಾಪನೆ ಮಾಡುವ ವಿಚಾರದಲ್ಲಿ ಅವರು ವ್ಯತ್ಯಾಸವನ್ನು ಹೊಂದಿಲ್ಲ ಅನ್ನುವುದನ್ನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತೇನೆ. ಆದ್ದರಿಂದ ಈ ವಿಷಯದ ಬಗ್ಗೆ ಯಾರೂ ಸಹ ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ. ಈ ಸಂದರ್ಭದಲ್ಲಿ ಸರ್ಕಾರದ ಬದ್ಧತೆ, ಸರ್ಕಾರ ಈಗಾಗಲೇ 20 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಒದಗಿಸಿ ಹಣವನ್ನು ಈ ಉದ್ದೇಶಕ್ಕಾಗಿ ತೆಗೆದಿರಿಸಿದೆ. ಅದನ್ನು ಸಹಿತ ಈ ಸಂದರ್ಭದಲ್ಲಿ ನೆನ ಸಿಕೊಳ್ಳುತ್ತಾ ಬರುವ ದಿವಸಗಳಲ್ಲಿ ಯಾವ ಹೆಜ್ಜೆಗಳನ್ನು ಇಡುತ್ತೇವೆ. ಅದರ ಬಗ್ಗೆ ವಿವರವಾಗಿ ಹೇಳಿಕೆಯನ್ನು ನಾಳೆ ನಾನು ಸದನಕ್ಕೆ ನೀಡುತ್ತೇನೆ.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು):– (ಮಾನ್ಯ ಉಪ ಮುಖ್ಯಮಂತ್ರಿಗಳ ಪರವಾಗಿ) ಮಾನ್ಯ ಅಧ್ಯಕ್ಷರೇ, ಈ